ಶ್ರೀ ಎನ್. ಹುಚ್ಚಮಾಸ್ತಿಗೌಡ.— ಎಲ್ಲೆಲ್ಲಿ ಈ ತರಹ ಅಕ್ರಮ ಸ್ವಾಧೀನಮಾಡಿಕೊಂಡು ದುರುಪಯೋಗವಾಗಿದೆ ಎಂದು ಮನವರಿಕೆಯಾದ ಕೂಡಲೇ ಪುನರ್ಪರಿಶೀಲಿಸಿಕೊಳ್ಳಲಾಗುತ್ತದೆ. ಸಾರ್ವತ್ರಿಕವಾಗಿ ಎಲ್ಲ ಪಂಚಾಯಿತಿಗಳಿಂದಲೂ ಡೈವೆಸ್ಟ್ ಮಾಡಿ ತೆಗೆದುಕೊಳ್ಳಬೇಕೇ ಬೇಡವೇ ಎನ್ನುವ ವಿಷಯ ಸರ್ಕಾರದ ಪರ್ಯಾಲೋಚನೆಯಲ್ಲಿದೆ.

REMOVAL OF EXAMINATION CENTRE FROM RAYARA-KOPPAL HIGH SCHOOL

718. Sri K. M. RUDRAPPA (Sakleshpur).—

Will the Minister of State for Primary and Secondary Education be pleased to state:—

(*a*) the reasons for removing the examination centre from Rayarakoppal High School of Alur Taluk;

(*b*) whether representations from the public for reviving of an examination centre for Rayarakoppal High School of Alur Taluk have been received;

(*c*) whether Government is aware that it is a Malnad region and that there is the necessity for the revival of the same?

Smt. E. E. VAZ (Minister of State for Primary and Secondary Education).—

(*a*) Due to insufficient strength.

(*b*) No.

(*c*) Though it is in Malnad Region, there is no necessity for revival of the centre for the reasons mentioned above.

ಶ್ರೀ ಕೆ. ಎಂ. ರುದ್ರಪ್ಪ.—ಸಾಕಷ್ಟು ಸಂಖ್ಯಾಬಲವಿಲ್ಲದೆ ಇರುವುದರಿಂದ ಪರೀಕ್ಷಾ ಕೇಂದ್ರವನ್ನು ತೆಗೆದು ಹಾಕಲಾಗಿದೆ ಎಂದು ಹೇಳಿದ್ದಾರೆ. ಅದು ಸಮರ್ಪಕವಾದ ಉತ್ತರವಲ್ಲ. ಆ ಕೇಂದ್ರಕ್ಕೆ ಯಸಳೂರು ಹೈಸ್ಕೂಲಿನಿಂದ ಕೂಡ ವಿದ್ಯಾರ್ಥಿಗಳು ಬರುತ್ತಿದ್ದರು ಮತ್ತು ಹಿಂದಿನ ವಿದ್ಯಾಮಂತ್ರಿಗಳ ಹತ್ತಿರ ಒಂದು ಡೆಲಿಗೇಷನ್ ತೆಗೆದುಕೊಂಡು ಹೋಗಿ ಪ್ರಾರ್ಥನೆ ಮಾಡಿಕೊಂಡಾಗ ಪುನರ್ಪರಿಶೀಲನೆ ಮಾಡುವುದಾಗಿ ಹೇಳಿದ್ದರು. ಈ ಬಗ್ಗೆ ತಾಲ್ಲೂಕು ಬೋರ್ಡಿನವರೂ ನಿರ್ಣಯ ಮಾಡಿದ್ದಾರೆ. ಈಗಲಾದರೂ ಇದನ್ನು ಪುನರ್ಪರಿಶೀಲನೆ ಮಾಡುತ್ತಾರೆಯೇ ?

† ಶ್ರೀಮತಿ ಇ. ಇ. ವಾಜ್.—ಒಂದೊಂದು ಕೇಂದ್ರದಲ್ಲಿ ಮಕ್ಕಳ ಸಂಖ್ಯೆ 300 ಇರಬೇಕು ಎನ್ನುವ ನಿಯಮವಿದೆ. ಎರಡೂ ಶಾಲೆಗಳಿಂದ 1973 ರಲ್ಲಿ 160 ಮಕ್ಕಳೂ, 1974 ರಲ್ಲಿ 150 ಮಕ್ಕಳೂ ಇದ್ದುದರಿಂದ ಕೇಂದ್ರವನ್ನು ಕೊಡಲು ಸಾಧ್ಯವಾಗುವುದಿಲ್ಲವೆಂದು ತೀರ್ಮಾನಿಸಲಾಯಿತು. ಅಲ್ಲದೆ ಹಾಸನ ಟೌನ್ ಹತ್ತು ಮೈಲಿ ದೂರದಲ್ಲಿದ್ದು ಅಲ್ಲಿ ಎಲ್ಲ ಸೌಕರ್ಯಗಳೂ ದೊರೆಯುವುದಾಗಿದ್ದು ರಾಯರಕೊಪ್ಪಲದಲ್ಲಿನ ಪರೀಕ್ಷಾ ಕೇಂದ್ರವನ್ನು ರದ್ದು ಮಾಡಲಾಗಿದೆ.

ಶ್ರೀ ಕೆ. ಎಂ. ರುದ್ರಪ್ಪ.—ಹಾಸನ ಆ ಭಾಗಕ್ಕೆ 24 ಮೈಲಿಯಾಗುತ್ತದೆ. ಇದು ಮಲೆನಾಡು ಪ್ರದೇಶವಾದ್ದರಿಂದ ಪುನರ್ಪರಿಶೀಲನೆ ಮಾಡುತ್ತಾರೆಯೇ ?

ಶ್ರೀಮತಿ ಇ. ಇ. ವಾಜ್.—ಇಷ್ಟು ಸಣ್ಣ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬಂದರೆ ಒಂದು ಪರೀಕ್ಷಾ ಕೇಂದ್ರವನ್ನು ಕೊಡುವುದಕ್ಕಾಗುವುದಿಲ್ಲ. ಅಲ್ಲದೆ ಎಕಾನಮಿ ಪೆಷರ್ಸ್‌ನಲ್ಲಿ 25 ಪರ್ಸೆಂಟ್ ಖೋತ ಮಾಡಿ ಖರ್ಚು ಕಡಮೆ ಮಾಡಬೇಕು ಎಂದು ಹರುವುದರಿಂದ 150 ಮಕ್ಕಳಿಗೆ ಒಂದು ಸೆಂಟರ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವುದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆಂದು ಭಾವಿಸುತ್ತೇನೆ. ಅದೂ ಅಲ್ಲದೆ ಹಾಸನದಲ್ಲಿ ಮಕ್ಕಳಿಗೆ ಏನೂ ತೊಂದರೆಯಾಗುವುದಿಲ್ಲ. ಎಲ್ಲ ಏರ್ಪಾಡುಗಳನ್ನೂ ಮಾಡಿದ್ದೇವೆ.